ವಿಜಯವಾಣಿ
ಕನ್ನಡಿಗರ ಧ್ವನಿ

ಕ್ರೀಡೆ/ಇತರೆ

# ವಿವಿ ಕ್ರಿಕೆಟ್: ಫೈನಲ್‌ಗೆ ಜೈನ್ ವಿವಿ ಲಗ್ಗೆ

**ಮುಂಬೈ:** ಸುಚಿತ್ ಜಗದೀಶ್ (10ಕ್ಕೆ 4) ನಿಖರ ಬೌಲಿಂಗ್ ದಾಳಿಯ ನೆರವಿನಿಂದ ಜೈನ್ ವಿವಿ ತಂಡ ಟೊಯೋಟಾ ವಿವಿ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಮುಂಬೈ ವಿವಿ ವಿರುದ್ಧ 6 ರನ್‌ಗಳಿಂದ ರೋಚಕ ಗೆಲುವು ಸಾಧಿಸಿ ಫೈನಲ್ ಹಂತಕ್ಕೆ ಲಗ್ಗೆ ಹಾಕಿದೆ.

ಶುಕ್ರವಾರ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ 'ಸದರ್ನ್ ಚಾಂಪ್ಸ್' ಹೆಸರಿನ ಜೈನ್ ತಂಡ ಗೌರವ್ ಗೋಯೆಲ್ (38), ನಾಯಕ ಕೌನೇನ್ ಅಬ್ಬಾಸ್ (34) ಮತ್ತು ನಿಹಾಲ್ ಉಲ್ಲಾಳ್ (32*) ಉಪಯುಕ್ತ ಕೊಡುಗೆಯ ನಡುವೆ 6 ವಿಕೆಟ್‌ಗೆ 145 ರನ್‌ಗಳ ಸಾಧಾರಣ ಮೊತ್ತ ಪೇರಿಸಿತ್ತು. ಪ್ರತಿಯಾಗಿ, ವೆಸ್ಟರ್ನ್ ವೋಲ್ವ್ಸ್ ಹೆಸರಿನ ಮುಂಬೈ ವಿವಿ ತಂಡಕ್ಕೆ ಜೈದೀಪ್ ಪರ್ದೇಶಿ (33) ಮತ್ತು ಕೆವಿನ್ ಡಿಅಲ್ಮೇಡ ... ಹಾಕಿಕೊಟ್ಟಿದ್ದರು. ಆಗ ಅಬ್ದುಲ್ ಮಜಿದ್ (27ಕ್ಕೆ 2) ಇವರಿಬ್ಬರನ್ನೂ 5 ರನ್ ಅಂತರದಲ್ಲಿ ಪೆವಿಲಿಯನ್‌ಗೆ ಅಟ್ಟಿದರೆ, ನಂತರ ಸುಚಿತ್ 4 ವಿಕೆಟ್ ಕಿತ್ತು ಪಂದ್ಯದ ಚಿತ್ರಣವನ್ನೇ ಬದಲಾಯಿಸಿದರು. ಅವರಿಗೆ ಇದು ಟೂರ್ನಿಯಲ್ಲಿ ಮೊದಲ ಪಂದ್ಯವಾಗಿತ್ತು.

ಮುಂಬೈಗೆ ಕೊನೆಯ ಓವರ್‌ನಲ್ಲಿ 12 ರನ್ ಬೇಕಾಗಿತ್ತು. ಆದರೆ ಶ್ರೇಯಸ್ ಗೋಪಾಲ್ 5 ರನ್ ಮಾತ್ರ ಬಿಟ್ಟುಕೊಟ್ಟು ಜೈನ್‌ಗೆ ಗೆಲುವು ತಂದರು.

**ಜೈನ್ ವಿವಿ: 6 ವಿಕೆಟ್‌ಗೆ 145** (ಗೌರವ್ ಗೋಯೆಲ್ 38, ಕೌನೇನ್ ಅಬ್ಬಾಸ್ 34, ನಿಹಾಲ್ ಉಲ್ಲಾಳ್ 32*, ಪಂಕಜ್ ಜೈಸ್ವಾಲ್ 26ಕ್ಕೆ 2, ಸಾಗರ್ ಗೋರಿವಲೆ 26ಕ್ಕೆ 2). **ಮುಂಬೈ ವಿವಿ: 8 ವಿಕೆಟ್‌ಗೆ 139** (ಜೈದೀಪ್ ಪರ್ದೇಶಿ 33, ಕೆವಿನ್ ಡಿಅಲ್ಮೇಡ 21, ಶಶಾಂಕ್ ಸಿಂಗ್ 23, ಪಂಕಜ್ ಜೈಸ್ವಾಲ್ 25, ಸುಚಿತ್ ಜಗದೀಶ್ 10ಕ್ಕೆ 4, ಅಬ್ದುಲ್ ಮಜಿದ್ 27ಕ್ಕೆ ...

## ನಾಳೆ ದೆಹಲಿ ವಿರುದ್ಧ ಪ್ರಶಸ್ತಿ ಹೋರಾಟ

**ಜೈ**ನ್ ವಿವಿ ಭಾನುವಾರ ದೆಹಲಿಯಲ್ಲಿ ನಡೆಯುವ ಪ್ರಶಸ್ತಿ ಹೋರಾಟದಲ್ಲಿ ಆತಿಥೇಯ ದೆಹಲಿಯ ಜಮಿಯಾ ಮಿಲಿಯಾ ಇಸ್ಲಾಮಿಯಾ ವಿವಿ ತಂಡವನ್ನು ಎದುರಿಸಲಿದೆ. ಗುರುವಾರದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ದೆಹಲಿ 10 ವಿಕೆಟ್‌ಗಳಿಂದ ಗ್ವಾಲಿಯರ್‌ನ ಜಿವಾಜಿ ವಿವಿ ತಂಡವನ್ನು ಸೋಲಿಸಿತ್ತು.

## ರಿಪೀಟ್ ಶೋ!

**ಜೈನ್** ವಿವಿ ತಂಡ ಕೆಲವು ತಿಂಗಳ ಹಿಂದಷ್ಟೇ ಮಣಿಪಾಲದಲ್ಲಿ ನಡೆದ ರೋಹಿನ್‌ಟನ್ ಬಾರಿಯಾ ಅಂತರ್ ವಿವಿ ಟೂರ್ನಿಯ ಫೈನಲ್ ಪಂದ್ಯದಲ್ಲೂ ಮುಂಬೈ ವಿವಿ ತಂಡವನ್ನು ಸೋಲಿಸಿತ್ತು.

